<u>ದಿಃ**28.02.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>

<u>ಪಾಟೀ ಸವಾಲು</u>:- ಆರೋಪಿ ಪರ P.H.T. for M.V.S., ವಕೀಲರಿಂದಃ-

ನಾನು ವ್ಯವಸಾಯ ಮಾಡುತ್ತೇನೆ . ನನಗೆ ಓದಲು ಮತ್ತು ಬರೆಯಲು ಬರುತ್ತದೆ . ನಾನು ಲಿಂಗನಹಳ್ಳಿ ಗ್ರಾಮದ ವಾಸಿ ಇರುತ್ತೇನೆ . ಆರೋಪಿ ನನಗೆ 7-8 ವರ್ಷದಿಂದ ಪರಿಚಯ. ಆರೋಪಿ ನನಗೆ ನನ್ನ ಚಿಕ್ಕಪ್ಪ ಬಸವರಾಜಪ್ಪ ಅವರಿಂದ ಪರಿಚಯ ಇರುತ್ತಾರೆ . ಅರಿಶಿಣ ಗುಂಡಿ ಬಸವರಾಜಪ್ಪ ಅವರಿಂದ ಆರೋಪಿ ಪರಿಚಯ ಆಗಿರುತ್ತಾರೆ ಎಂದರೆ ಸಾಕ್ಷಿ ನನ್ನಚಿಕ್ಕಪ್ಪ ಲಿಂಗನಹಳ್ಳಿ ಬಸವರಾಜಪ್ಪ ಅವರಿಂದ ಪರಿಚಯ ಇರುತ್ತಾರೆ ಎಂದು ಹೇಳುತ್ತಾರೆ . ಆರೋಪಿ ಪೂರ್ಣ ಹೆಸರು ಸಿದ್ದೇಶಿ ಇರುತ್ತದೆ . ಅವರ ಊರು ಚಿಕ್ಕೇರಹಳ್ಳಿ ಗ್ರಾಮ , ಮೊಳಕಾಲ್ಮೂರು ತಾಲ್ಲೂಕು , ಚಿತ್ರದುರ್ಗ ಜಿಲ್ಲೆ ಇರುತ್ತದೆ . ನನಗೆ ಸೇರಿದ 15

ಎಕರೆ ಜಮೀನು ಇರುತ್ತದೆ .ನಾವು ಒಟ್ಟು 3 ಜನ ಅಣ್ಣ ತಮ್ಮಂದಿರು ಇರುತ್ತೇವೆ . ಸದರಿ 15 ಎಕರೆಗೆ ಸೇರಿದ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ . ನಾನು ಆರೋಪಿಗೆ ಒಟ್ಟು 5 ಲಕ್ಷ ಹಣವನ್ನು ನೀಡಿರುತ್ತೇನೆ . ನಾನು ಆರೋಪಿಗೆ ದಿ:07.06.2022 ರಂದು ಸದರಿ 5 ಲಕ್ಷ ಹಣವನ್ನು ನೀಡಿರುತ್ತೇನೆ . ನಾನು ಈ ಸುಮಾರು 7 ವರ್ಷದಿಂದಲೂ ಆರೋಪಿಯ ಖಾತೆಗೆ ಹಣವನ್ನು ಜಮೆ ಮಾಡಿರುವುದಿಲ್ಲ . ನಾನು ಆರೋಪಿಗೆ ನೀಡಿದೆ ಎಂದು ಹೇಳುವ 5 ಲಕ್ಷ ಹಣವನ್ನು ನೀಡಿದಾಗ ನಾನು ಮಾತ್ರ ಆರೋಪಿ ಮಾತ್ರ ಇದ್ದೇವು . ನಿಪಿ 1 ಚೆಕ್ ಸಂಖ್ಯೆ 729 ಇರುತ್ತದೆ . ನಿಪಿ 1 ಚೆಕ್ ಅನ್ನು ದಿ: 07.09.2022 ರಂದು ನನ್ನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ , ಜಗಳೂರು ಶಾಖೆಗೆ ಸಲ್ಲಿಸಿರುತ್ತೇನೆ . ನನಗೆ ನಿಪಿ 2 ಹಿಂಬರನ ದಿ: 14.09.2022 ರಂದು ವಾಪಸ್ ಬಂದಿರುತ್ತದೆ . ಆರೋಪಿಯ ಪೂರ್ಣ ಹೆಸರು, ಅವರ ತಂದೆ ಹೆಸರು ಮತ್ತು ಅವರ ಊರು ನನಗೆ ಸರಿಯಾಗಿ ಗೋತ್ತಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಪೂರ್ಣ ಹೆಸರು ಎನ್ ಸಿದ್ದೇಶಪ್ಪ ತಂದೆ ದೊಡ್ಡನುಂಗಪ್ಪ ಇರುತ್ತದೆ ಎಂದರೆ ಸರಿ. ನಾನು ನಿಪಿ 3 ನೋಟೀಸ್ ಅನ್ನು ಆರೋಪಿಯ ಮತ್ತೊಂದುವಿಳಾಸ ಬ್ಯಾಂಕ್ ಕಾಲೋನಿ ಗೋನೂರು ರಸ್ತೆ , ಚಿತ್ರದುರ್ಗ ಟೌನ್ ರಲ್ಲಿ ಆರೋಪಿ ವಾಸವಿರವ ಬಗ್ಗೆ ಯಾವುದಾದದರು ದಾಖಲೆ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೀರ ಎಂದರೆ ಸಾಕ್ಷಿ ನಾನು ನೋಡಿರುತ್ತೇನೆ ಎಂದು ಹೇಳುತ್ತಾರೆ . ನಾನು ಸದರಿ ವಿಳಾಸ ಆರೋಪಿಗೆ ಸೇರಿದ್ದು ಇರುತ್ತದೆ ಎಂದು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸರಿ. ನಾನು ಆರೋಪಿಗೆ ಯಾವುದೇ ಹಣವನ್ನು ನೀಡಿರುವುದಿಲ್ಲ , ಆರೋಪಿಯನ್ನು ನಾನು ಈ ಹಿಂದೆ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನೀಡಿದೆ ಎಂದು ಹೇಳುವ 5 ಲಕ್ಷ ಹಣದಲ್ಲಿ 100 , 500,1000 ರೂಗಳ ಮುಖಬೆಲೆಯ ನೋಟುಗಳು ಎಷ್ಟು ಇದ್ದವು ಎಂದರೆ ಸಾಕ್ಷಿ 500 ರೂ ಮುಖಬೆಲೆಯ 10 ಕಟ್ಟು ಇದ್ದವು ಎಂದು ಹೇಳುತ್ತಾರೆ . ಆರೋಪಿಗೆ ನೀಡಿದೆ ಎಂದು ಹೇಳುವ 5 ಲಕ್ಷ ಹಣವನ್ನು ನಮ್ಮ ಮನೆಯಲ್ಲಿ ಇದ್ದ ಹಣವನ್ನು ನೀಡಿರುತ್ತೇನೆ . ನನಗೆ ವಾರ್ಷಿಕವಾಗಿ ಸುಮಾರು 5 ರಿಂದ 5 ½ ಲಕ್ಷ ಆಧಾಯ ಬರುತ್ತದೆ . ನಾವು ನಮ್ಮ ಅಣ್ಣಂದಿರೂ ಎಲ್ಲಾರು ಒಟ್ಟು ಕುಟುಂಬದಲ್ಲಿ

ವಾಸಮಾಡಿಕೊಂಡಿರುತ್ತೇನೆ . ನಾನು ಆರೋಪಿಗೆ ನೀಡಿದೆ ಎಂದು ಹೇಳುವ 5 ಲಕ್ಷ ಹಣದ ಬಗ್ಗೆ ನಮ್ಮ ತಂದೆಗೆ ತಿಳಿಸಿದ ನಂತರ ಆರೋಪಿಗೆ ನೀಡಿರುತ್ತೇನೆ . ಆರೋಪಿ ಸಿವಿಲ್ ಕ್ಯಾಂಟ್ರಕರ್ ಆಗಿ ಕೆಲಸ ಮಾಡುತ್ತಾರೆ . ನಾನು ಆರೋಪಿಗೆ ನಿಪಿ 3 ದಾಖಲೆಯನ್ನು ದಿಃ 28.09.2022 ರಂದು ಕಳುಹಿಸಿರುತ್ತೇನೆ. ನಾನು ಆರೋಪಿಗೆ ವಾಸ ಮಾಡುತ್ತಿರುವ ಚಿಕ್ಕರೇಹಳ್ಳಿ ಗ್ರಾಮಕ್ಕೆ ಕಳುಹಿಸಿರುವುದಿಲ್ಲ , ಚಿತ್ರದುರ್ಗದ ಬ್ಯಾಂಕ್ ಕಾಲೋನಿ ತಪ್ಪು ವಿಳಾಸಕ್ಕೆ ನಿಪಿ 3 ನೋಟೀಸ್ ಅನ್ನು ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ನಮಗೆ ಅನುಕೂಲಕ್ಕೆ ತಕ್ಕಂತೆ ನಿಪಿ 3 ನೋಟೀಸ್ ಅನ್ನು ಆರೋಪಿಯ ತಪ್ಪು ವಿಳಾಸಕ್ಕೆ ನೋಟೀಸ್ ಕಳುಹಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಆಧಾಯ ತೆರಿಗೆ ಪಾವತಿದಾರ ಇರುವುದಿಲ್ಲ . ನಾನು ಜೆ ಎಸ್ ಟಿ ಪಾವತಿ ಮಾಡುತ್ತಿರಲಿಲ್ಲ . ಆರೋಪಿ ವಿರುದ್ಧ ಈ ದೂರನ್ನು ಯಾವ ದಿನಾಂಕದಂದು ಸಲ್ಲಿಸಿರುವ ಬಗ್ಗೆ ನನಗೆ ನೆನಪಿರುವುದಿಲ್ಲ . ನನಗೆ ಆರೋಪಿಯ ಅರಿಶಿಣಗುಂಡಿ ಬಸವರಾಜ್ ಕಡೆಯಿಂದ ಕೇವಲ 3 ತಿಂಗಳಿಂದ ಮಾತ್ರ ಪರಿಚಯ ಇರುತ್ತದೆ ಎಂದರೆ ಸರಿಯಲ್ಲ. ನಾನು ಸದರಿ ಅರಿಶಿಣಗುಂಡಿ ಬಸವರಾಜ್ ಮತ್ತು ಆರೋಪಿ ಜೊತೆ ಕಾರಿನಲ್ಲಿ ಹೋಗಿ ಬಂದು ಮಾಡುತ್ತಿದ್ದೇ ಎಂದರೆ ಸರಿಯಲ್ಲ. ನಾನು ಆ ಸದರಿ ಸಮಯದಲ್ಲಿ ಕೂಡ ಆರೋಪಿಗೆ ನನ್ನ ಖಾತೆ ಮೂಲಕ ಕಳುಹಿಸಿರುವುದಿಲ್ಲ . ನಾನು ಆರೋಪಿಗೆ ನೀಡಿದೆ ಎಂದು ಹೇಳುವ 5 ಲಕ್ಷ ಹಣವನ್ನು ಜಗಳೂರಿನ ತಾಲ್ಲೂಕು ಪಂಚಾಯತಿ ಕಛೇರಿಯ ಬಳಿ ನೀಡಿರುತ್ತೇನೆ . ನನಗೆ ಆರೋಪಿ ತಮ್ಮ ಮನೆಯಲ್ಲಿ ಕೆಲವೊಂದು ಸಮಸ್ಯೆ ಇರುವ ಕಾರಣ ಸದರಿ ಹಣವನ್ನು ಪಡೆದುಕೊಂಡಿರುತ್ತಾರೆ . ಈ ಹಿಂದೆ ಆರೋಪಿ ಕಾರಿನಲ್ಲಿ ನಾನು ಪ್ರಯಾಣ ಮಾಡುತ್ತಿದ್ದಾಗ , ಆರೋಪಿ ಖಾಲಿನಲ್ಲಿ ಇದ್ದ ಖಾಲಿ ಚೆಕ್ ಅನ್ನು ನಾನು ತಗೆದುಕೊಂಡು ದುರುಪಯೋಗ ಪಡಿಸಿಕೊಂಡು ಈ ಪಿರ್ಯಾದು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ನಾನು 5 ಲಕ್ಷ ರೂಪಾಯಿ ಇಟ್ಟಿರುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಸಿಸಿ.ನಂ.1391/2022
ಪಿ ಡಬ್ಲ್ಯೂ-1

( ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಆಲಿಸಿ ಸಮಯ ನೀಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-
ಸಿವಿಲ್ ನ್ಯಾಯಾಧೀಶರು**,** ಜಗಳೂರು